

ಮೇಲೆ ಕೆನ್ನೆ, ಕುತ್ತಿಗೆ ಹಾಗೂ ಕಣ್ಣಿನ ಹುಬ್ಬು ಕ್ರಾಪ್ ಮಾಡಲು ರೇಸರ್ ಬ್ಲೇಡ್ ಹಾಕುತ್ತಿದ್ದ.

ಕಟ್ಟಿಂಗ್ ಮುಗಿದ ಮೇಲೆ ಎಣ್ಣೆ ತಿಕ್ಕಿ ತಿಕ್ಕಿ, ಎಣ್ಣೆ ಇಳಿದ ಮೇಲೆ ಪಟಪಟನೆ ಡೋಲಿನಂತೆ ತಲೆ ಬಡಿಯುತ್ತಿದ್ದ. ಅದಕ್ಕೇ ತಲೆ ಮಸಾಜು ಎಂದರೆ ಭಯವಾಗುತ್ತಿತ್ತು. ನಂತರ ಮುಖ ಹಾಗೂ ಕತ್ತಿನ ಸುತ್ತ ಪಾಂಡ್ಸ್ ಪೌಡರ್ ಹಾಕಿ ಬ್ರಷ್ ಸವರಿ ಕೂದಲನ್ನು ಕೊಡವಿ ಕಳುಹಿಸುತ್ತಿದ್ದ. ಅವನು ಹಾಕುವ ಪೌಡರ್ ಮತ್ತು ಕೆನ್ನೆಗೆ ಹಚ್ಚುವ ಲೋಷನ್ ಸುಗಂಧ ಪರಿಮಳದಿಂದ ಮನಸು ಎಂಥದೋ ಆಹ್ಲಾದದಲ್ಲಿ ತೇಲಾಡುತ್ತಿತ್ತು.

ಶೇವಿಂಗ್ ಮುಂಚೆ ಬ್ಲೇಡ್ ತೋರಿಸಿ ಅಶೋಕ, ಸೆವೆನ್–ಓ–ಕ್ಲಾಕ್, ಪನಾಮಾ, ಗಿಲ್ಲೆಟ್ ಎಂದು ಹೇಳಿ ತುಂಡು ಮಾಡಿ ಶೇವಿಂಗ್ ಆರಂಭಿಸುತ್ತಿದ್ದ. ಅಂಗಡಿಯಲ್ಲಿ ಶೇವಿಂಗ್ ರಿವರ್ಸ್ ಮಾಡಿದಾಗ ನುಣುಪಾದ ಕೆನ್ನೆ ಒರಟಾಗುವುದೆಂದು ನನ್ನ ಸ್ನೇಹಿತ ಹೇಳಿದ್ದನ್ನು ಕೇಳಿ ಭಯವಾಗಿ, ನಾನು ಹೆಚ್ಚಾಗಿ ಮನೆಯಲ್ಲೇ 'ಸೇಫ್ಟಿರೇಸರ್'ನಿಂದ ಶೇವಿಂಗ್ ಮಾಡಿಕೊಳುತ್ತಿದ್ದೆ. ಆದರೂ ಶೇವಿಂಗ್ ನಂತರ ಅಂಗಡಿಯವನು ಸ್ಫಟಿಕದ (ಆಲಂ) ಕಲ್ಲಿನಿಂದ ನುಣುಪಾದ ಕೆನ್ನೆ ಉಜ್ಜುವಾಗ, ಸ್ಫಟಿಕದ ಸ್ಪರ್ಶದಿಂದ ಮೈ ರೋಮಾಂಚನಗೊಳ್ಳುವ ಸುಖ ಅನುಭವಿಸಲು ಕೆಲವೊಮ್ಮೆ ಅಲ್ಲಿಯೇ ಶೇವಿಂಗ್ ಮಾಡಿಸಿಕೊಳ್ಳುತ್ತಿದ್ದೆ. ಸ್ಫಟಿಕಕ್ಕೆ ಮುಖದ ಕಲೆ ನಿವಾರಣೆ ಹಾಗೂ ಆಂಟಿ ಬ್ಯಾಕ್ಟೀರಿಯಲ್ ಗುಣವಿದೆಯೆಂದು ಆತ ಪ್ರವಚನ ನೀಡಿದಾಗ ತಲೆದೂಗದವರಾರು? ಎಲ್ಲ ಮುಗಿದ ಮೇಲೆ ಮನೆಗೆ ಹೋಗಿ ಸ್ನಾನ ಮಾಡಿಕೊಂಡು ಬಂದರೆ ಮಿಷನ್ ಹಾಕಿ ಕೂದಲು ಸೆಟ್ ಮಾಡುತ್ತೇನೆಂದು ಹೇಳಿ ಕಳುಹಿಸುತ್ತಿದ್ದ. ಅವನ ಭಾಷೆಯಲ್ಲಿ ಮಿಷಿನ್ ಎಂದರೆ ಹೇರ್ ಡ್ರೈಯರ್. ಕೂದಲು ಸೆಟ್ ಮಾಡಿಸಿಕೊಳ್ಳುವ ಆಸೆಯಾದರೂ ಸ್ನಾನದ ನಂತರ ಮನೆಯಲ್ಲಿ ಕಳುಹಿಸುವುದಿಲ್ಲವೆಂದು ಸುಮ್ಮನಾಗುತ್ತಿದ್ದೆ.

ತನ್ನ ಅಂಗಡಿಯ ಮುಂದೆ ಯಾರೇ ಸಾಗಲಿ, ಅವರಿಗೊಂದು ನಮಸ್ಕಾರ ಹೇಳುತ್ತಿದ್ದ ಮಾಲೀಕ ಅವರ ಕುಶಲೋಪರಿ ವಿಚಾರಿಸಿ, ಅವರು ಬೇರೆಲ್ಲಾದರೂ ಕ್ಷೌರ ಮಾಡಿಸಿಕೊಂಡಿದ್ದರೆ ಯಾಕೋ ಬಲಗಡೆ ಲಾಕ್ ಉದ್ದವಿದೆ, ಆ ಕಡೆ ಸರಿಯಾಗಿ ಕತ್ತರಿಸಿಲ್ಲ, ಈ ಕಡೆ ಸರಿಯಾಗಿ ಕೆರೆದಿಲ್ಲ, ಕಾಡಿನ ಹುಲ್ಲುಗಾವಲಿನಂತಿದೆ ಎಂದು ತಲೆಯಲ್ಲಿ ಹುಳ ಬಿಡುತ್ತಿದ್ದ. ಯಾವುದೇ ಟೈಲರ್ ಮತ್ತೊಬ್ಬ ಹೊಲಿದ ಅಂಗಿ ಒಪ್ಪುವುದಿಲ್ಲ, ಒಬ್ಬ ವೈದ್ಯನ ಪರೀಕ್ಷೆ ಮತ್ತೊಬ್ಬ ವೈದ್ಯ ಒಪ್ಪುವನೆ? ಇದು ವೃತ್ತಿ ನಿಯಮ!

ಚಿಕ್ಕ ಹುಡುಗರನ್ನು ಕರೆತರುತ್ತಿದ್ದ ತಾಯಂದಿರು ತಮ್ಮ ಮಕ್ಕಳಿಗೆ ಮಿಲ್ಟ್ರಿ ಕಟ್ ಮಾಡಿ ಎಂದು ಹೇಳಿ ಅವರನ್ನು ಕೂರಿಸಿ ಹೋಗುತ್ತಿದ್ದರು. ಮಾಲೀಕ ಸಿಂಹಾಸನದಲ್ಲಿ ಕುಳಿತುಕೊಳ್ಳಲು ಒಂದು ಮಣೆ (ಮರದ ಹಲಗೆ) ಹಾಕಿ ಅವರನ್ನು ಎತ್ತರಕ್ಕೆ ಕೂರಿಸುತ್ತಿದ್ದ. 'ಮುಖ ನೋಡಿ ಮಣೆ ಹಾಕಿ' ಎನ್ನುವ ಮಾತು ಸಾಮಾನ್ಯವಾಗಿ ಕೇಳಿರುವುದಾದರೂ ಇಲ್ಲಿ ಎತ್ತರ ನೋಡಿ ಮಣೆ ಹಾಕುತ್ತಾರೆ.



ನನ್ನ ಬಾಲ್ಯದಲ್ಲಿ ಬೇಸಿಗೆ ರಜೆಗೆ ನನ್ನ ತಾಯಿಯ ತವರೂರಾದ ಕಾಮಸಮುದ್ರಕ್ಕೆ ಹೋಗುತ್ತಿದ್ದೆ. ಅಲ್ಲಿ ಕ್ಷೌರಿಕರು ಮನೆ ಮನೆಗೆ ಬಂದು ಕ್ಷೌರ ಮಾಡುತ್ತಿದ್ದರು. ನಮ್ಮ ತಾತನವರಿಗೆ ಕ್ಷೌರ ಮಾಡುತ್ತಿದ್ದವನು ಮುನೆಪ್ಪ. ಚೌಲ ಕಾರ್ಯಕ್ರಮದಿಂದ ಹಿಡಿದು ಶ್ರಾದ್ಧದವರೆಗೂ ಮುನೆಪ್ಪ ಇರಲೇಬೇಕು. ನಮ್ಮ ತಾತ ಕ್ಷೌರ ಮಾಡಿಕೊಳ್ಳುವುದಕ್ಕೆ ತಿಥಿ, ವಾರ, ದಿನ ನಕ್ಷತ್ರ ನೋಡಿ ನಿಗದಿಮಾಡುತ್ತಿದ್ದರು. ಆ ಸಮಯದಲ್ಲಿ ಕ್ಷೌರ ಮಾಡಿಕೊಂಡರೆ ಆಯುಸ್ಸು ಹೆಚ್ಚುವುದೆಂದು ತಾತನ ನಂಬಿಕೆ. ನನ್ನ ಉದ್ದ ಕೂದಲನ್ನು ಕಂಡು ನನ್ನ ತಾತ 'ಇದೇನು ಹಿಪ್ಪಿಯಂತೆ ಕೂದಲಿದೆ, ಕ್ಷೌರ ಮಾಡಿಸೋಣ' ಬಾ ಎಂದು ಒತ್ತಾಯಿಸುತ್ತಿದ್ದರು.

ನಮ್ಮ ತಾತನಿಗೆ ನಾವು ಹನ್ನೆರಡು ಮೊಮ್ಮಕ್ಕಳು. ಎಲ್ಲರೂ ಬಟ್ಟೆ ಬಿಚ್ಚಿ, ಸೊಂಟಕ್ಕೆ ಟವೆಲ್ ಸುತ್ತಿಕೊಂಡು, ಅರೆಬೆತ್ತಲೆಯಾಗಿ ನಮ್ಮ ಸರದಿಗೆ ಸಾಲಾಗಿ ನಿಲ್ಲುತ್ತಿದ್ದೆವು. ಮನೆಯ ಹಿತ್ತಲಿನ ಮರದ ಕೆಳಗೆ ಒಂದು ಇಟ್ಟಿಗೆ ಕೊಟ್ಟು ಕೂರಿಸಿ, ಕೈಗೆ ಸಣ್ಣ ಕನ್ನಡಿ ಕೊಟ್ಟು ಮುನೆಪ್ಪ ತನ್ನ ಕೆಲಸ ಆರಂಭಿಸುತ್ತಿದ್ದ. ಮನಸಿನಲ್ಲಿ ಆತಂಕ ಒಂದು ಕಡೆಯಾದರೆ, ಮತ್ತೊಂದು ಕಡೆ ಏನೋ ಹೊಸ ಬಗೆಯ ಕಟ್ಟಿಂಗ್ ಎಂದು ಕನ್ನಡಿಯಲ್ಲಿ ನೋಡುತ್ತಿದ್ದೆ. ನಗರದಲ್ಲಿ ಎತ್ತರದ ಚೇರ್‌ನಲ್ಲಿ ಕುಳಿತುಕೊಳ್ಳುತ್ತಿದ್ದ ನನಗೆ ಇದೇಕೋ ಮುಜುಗರ ಮತ್ತು ಭಯ ಎರಡೂ ಒಮ್ಮೆ ಆಯಿತು. ನನ್ನ ಮುಖಭಾವ ಗಮನಿಸಿದ ಮುನೆಪ್ಪ, 'ನಿನ್ನ ತಾತನ ಅಪ್ಪನಿಗೆ ಕೂಡ ನನ್ನ ಅಪ್ಪ ಹನುಮಪ್ಪ ಕ್ಷೌರ ಮಾಡುತ್ತಿದ್ದರು ಗೊತ್ತಾ?' ಎಂದು ಮಾತನಾಡುತ್ತಾ ನನ್ನನ್ನು ನಿಧಾನವಾಗಿ ಪಳಗಿಸಿಕೊಂಡು, ಕಟ್ಟಿಂಗ್ ಶುರು ಮಾಡಿದ್ದು ಈಗಲೂ ನೆನಪಿದೆ. ನಮಗೆ ಮುಕ್ಕೋಟಿ ದೇವರುಗಳು. ನಮ್ಮ ಜನಸಂಖ್ಯೆ ಹೆಚ್ಚಾದಂತೆ ದೇವರ ಸಂಖ್ಯೆ ಕೂಡ ಹೆಚ್ಚಾಗಿರಬಹುದು, ಅಲ್ಲಿ ಕೂಡ ಕ್ಷೌರಿಕರ ಡಿಮ್ಯಾಂಡ್ ಹೆಚ್ಚಾಗಿ ನಮ್ಮ ಅಪ್ಪ ಹನುಮಪ್ಪನನ್ನು ಕರೆದುಕೊಂಡಿರಬಹುದೆಂದು ಹೇಳಿ ದುಃಖಪಡುತ್ತಿದ್ದ ಮುನೆಪ್ಪ.

ಸಂಜೆ ಹೊತ್ತು ದೇವಾಲಯದ ಕಾರ್ಯಕ್ರಮ ಅಥವಾ ವಿಶೇಷ ಸಂದರ್ಭಗಳಲ್ಲಿ ಮುನೆಪ್ಪ ರೇಷ್ಮೆ ಜುಬ್ಬಾ ಧರಿಸಿ ನಾದಸ್ವರ ನುಡಿಸುತ್ತಿದ್ದರು. ಈ ಕಸುಬಿನ ಬಹುತೇಕರು ಕಲಾಪ್ರಿಯರು. ಮದುವೆ ಮನೆ, ಗೃಹಪ್ರವೇಶ, ದೇವಾಲಯಗಳ ರಥೋತ್ಸವಗಳು, ಇತರ ಸಮಾರಂಭಗಳು ಕಳೆಗಟ್ಟುತ್ತಿದ್ದುದೇ ಇವರ ವಾದ್ಯಗೋಷ್ಠಿಗಳಿಂದ ಎನ್ನಬಹುದು. ವಾದ್ಯ ನುಡಿಸುವುದು, ನಾಟಕ ಆಡುವುದು, ಚಲನಚಿತ್ರದಲ್ಲಿ ನಟಿಸುವುದು ಕೂಡ ಅವರ ಇತರ ಹವ್ಯಾಸಗಳು. ಇವರೆಲ್ಲ ಕಲಾದೇವಿಯ ಕುಲದವರು.

ಉಳಿ ಹಿಡಿದು ಕಲ್ಲನ್ನು ಕೆತ್ತಿ ಶಿಲೆ ಮಾಡುವ